**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ**

ಉಪಸ್ಥಿತರು
**ಶ್ರೀಮತಿ ಪವಿತ್ರ.ಎಂ.ಡಿ ಬಿ.ಎ., ಎಲ್‌ಎಲ್.ಬಿ.,**
ಏಕಕಾಲೀನ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ತರೀಕೆರೆ**

# ಅಸಲು ದಾವಾ ನಂ.*58/2016*

**ದಿನಾಂಕಃ *20* ನೇ ಅಕ್ಟೋಬರ್ *2018***

## *ಆದೇಶ*

ಮಾನ್ಯ ಸಹಾಯಕ ಸರ್ಕಾರಿ ವಕೀಲರು ಕಲಂ *20* ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮದಡಿಯಲ್ಲಿ ಮೆಮೋವನ್ನು ಸಲ್ಲಿಸಿದ್ದು, ಸದರಿ ಕಾಯಿದೆಯ ಅನುಷ್ಠಾನದ ಪ್ರಕಾರ ಸರ್ಕಾರದ ಭೂಮಿಯನ್ನು ಯಾವುದೇ ರೀತಿಯಲ್ಲಿ ಕಬಳಿಸುವ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ದಾಖಲಾಗಿ ವಿಚಾರಣೆಗೆ ಬಾಕಿ ಇರುವ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣವನ್ನು ಇತ್ಯರ್ಥಕ್ಕಾಗಿ ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಲು ನಿರ್ದೇಶನವಿರುವುದರಿಂದ ಪ್ರಸ್ತುತ ಪ್ರಕರಣವನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಲು ಪ್ರಾರ್ಥಿಸಿರುತ್ತಾರೆ.

ವಾದಿ ಪರ ವಕೀಲರು ಮೇಲ್ಕಂಡ ಮೆಮೋಗೆ ತಮ್ಮ ತಕರಾರು ಪತ್ರವನ್ನು ಸಲ್ಲಿಸಿದ್ದು, ಸದರಿ ತಕರಾರು ಪತ್ರದಲ್ಲಿ ವಾದಿಯು ದಾವಾ ಸ್ವತ್ತಿನ ಖಾತೆ ಹಾಲಿ ವಾದಿಯ ಹೆಸರಿನಲ್ಲಿದ್ದು, ಅದು ಮೂಲತಃ ಅವರ ಪಿತ್ರಾರ್ಜಿತ ಆಸ್ತಿಯಾಗಿದ್ದು, ದಾವಾ ಆಸ್ತಿಯಲ್ಲಿ ಪ್ರತಿವಾದಿಯರೆ *5* ಗುಂಟೆ ಜಮೀನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಸರ್ಕಾರಿ ಪ್ರೌಢಶಾಲಾ ಕಟ್ಟಡ ಹಾಗೂ ಪದವಿ ಪೂರ್ವ ಕಾಲೇಜು ಕಟ್ಟಡವನ್ನು ಕಟ್ಟಿಕೊಂಡು ತಂತಿ ಬೇಲಿಯನ್ನು ಹಾಕಿಕೊಂಡಿರುವ ಕಾರಣ ಹಾಗೂ ವಾದಿಯು ಪ್ರತಿವಾದಿಯರಿಗೆ ಸಂಬಂಧಪಟ್ಟ ಯಾವುದೇ ಜಮೀನನ್ನು ಕಬಳಿಕೆ ಮಾಡಿಕೊಂಡಿರದ ಕಾರಣ ಮಾನ್ಯ ಸಹಾಯಕ ಸರ್ಕಾರಿ ವಕೀಲರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಹೇಳಿರುತ್ತಾರೆ.

ವಾದವನ್ನು ಕೇಳಲಾಯಿತು.

ಪ್ರಸ್ತುತ ಪ್ರಕರಣದ ಕಡತವನ್ನು ಪರಿಶೀಲಿಸಲಾಯಿತು. ವಾದಿಯು ಪ್ರಸ್ತುತ ದಾವೆಯನ್ನು ಅವರು ದಾವಾ ಸ್ವತ್ತಿನ ಕಾನೂನು ಬದ್ಧ ಸಂಪೂರ್ಣ ಮಾಲೀಕರೆಂದು ಘೋಷಿಸುವಂತೆಯು ಹಾಗೂ ಪ್ರತಿವಾದಿಯರು ಅಕ್ರಮವಾಗಿ ಕಟ್ಟಿಕೊಂಡಿರುವ ಕಟ್ಟಡವನ್ನು ಕೆಡವಿ ಹಾಕಿ ತಂತಿಬೇಲಿಯನ್ನು ತೆರವುಗೊಳಿಸಿ ದಾವಾ ಸ್ವತ್ತಿನ ಖಾಲಿ ಸ್ವಾಧೀನವನ್ನು ವಾದಿಗೆ ಬಿಟ್ಟುಕೊಡುವಂತೆ ನಿರ್ಬಂಧಕಾಜ್ಞೆ ಆದೇಶ ಮಾಡಬೇಕೆಂದು ಕೋರಿರುತ್ತಾರೆ. ವಾದಿಯು ಪ್ರಸ್ತುತ ಪ್ರಕರಣದದಲ್ಲಿ ಹಾಜರುಪಡಿಸಿರುವ ದಾಖಲಾತಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ದಾವಾ ಸ್ವತ್ತು ವಾದಿಯ ಹೆಸರಿನಲ್ಲಿದೆ ಎಂದು ಮೇಲ್ನೋಟಕ್ಕೆ ತೋರಿಸುತ್ತದೆ. ವಾದಿಯು ಅವರು *2* ಎಕರೆ *14* ಗುಂಟೆ ಜಮೀನಿನ ಮಾಲೀಕರಾಗಿರುತ್ತಾರೆಂದು ಹೇಳಿದ್ದು, ಆದರೆ ವಿಸ್ತೀರ್ಣದಲ್ಲಿ ಮೇಲ್ನೋಟಕ್ಕೆ ವ್ಯತ್ಯಾಸವಿದ್ದರೂ ಸಹ ಸರ್ಕಾರಕ್ಕೆ ಸಂಬಂಧಪಟ್ಟ ಸ್ವತ್ತಿನ ಕಬಳಿಕೆಯಾಗುತ್ತಿದೆ ಎಂದು ಈ ಹಂತದಲ್ಲಿ ಯಾವುದೇ ಸೂಕ್ತ ದಾಖಲಾತಿಗಳು ಲಭ್ಯವಿರದ ಕಾರಣ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

## <u>ಆದೇಶ</u>

ಮಾನ್ಯ ಸಹಾಯಕ ಸರ್ಕಾರಿ ವಕೀಲರು ಸಲ್ಲಿಸಿರುವ ಕಲಂ *20* ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮದಡಿಯಲ್ಲಿ ಸಲ್ಲಿಸಿರುವ ಮೆಮೋವನ್ನು ತಿರಸ್ಕರಿಸಲಾಗಿರುತ್ತದೆ.

ಸಹಿ/-

ಏಕಕಾಲೀನ **ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರದನ್ಯಾದಂ ; ತರೀಕೆರೆ**